ಕಟ್ಟೀಪುರ ಎಡದಂಡೆ ನಾಲೆಯಂಲ್ಲಿ ಹೂಳು ತೆಗೆಯುವ ವಿಷಯ.

೨೪೬. ಶ್ರೀ ಎಸ್. ನಂಜಪ್ಪ (ಕೃಷ್ಣರಾಜನಗರ) — ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣರಾಜನಗರ ತಾಲ್ಲೂಕಿನ ಕಟ್ಟೀಪುರ ಎಡದಂಡೆ ನಾಲೆಯ ೨೦ನೆಯ ಮೈಲಿಯಿಂದ ೨೫ನೆಯ ಮೈಲಿಯವರೆಗೆ ಹೂಳು ತೆಗೆಯದೇ ನೀರು ಬಾರದೇ ಭತ್ತದ ಬೇಸಾಯಕ್ಕೆ ತೊಂದರೆಯಾಗಿರುವುದೂ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಹೂಳು ತೆಗೆಯಲು ಸರ್ಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ?

ಇ) ಕೃಷ್ಣರಾಜನಗರ ತಾಲ್ಲೂಕಿನಲ್ಲಿ ಹರಿಯುವ ಈ ಎಡದಂಡೆ ನಾಲೆಯ ಪ್ರದೇಶವನ್ನು ಇನ್ನು ನೀರಾವರಿ ಇಲಾಖೆಗೆ ವಹಿಸಿ ದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಈ ಎಡದಂಡೆ ನಾಲೆಯ ಪ್ರದೇಶವನ್ನು ನೀರಾವರಿ ಇಲಾಖೆಗೆ ವಹಿಸಿ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್. ಡಿ. ದೇವೇಗೌಡ(ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಅಹುದು.

ಆ) ಕ್ರಮವನ್ನು ಕೈಗೊಳ್ಳಲಾಗುತ್ತಿದೆ.

ಇ) ಅಹುದು.

ಈ) ಅಹುದು.

ಹೊಸದುರ್ಗ ತಾಲ್ಲೂಕಿನ ಗಂಜಿಗೆರೆ ಕೆರೆಯಂ ಒಡೆದು ಹೋಗಿರುವ ಬಗ್ಗೆ

೨೫೨, ಶ್ರೀ ಜಿ. ಬಸಪ್ಪ (ಹೊಸದುರ್ಗ).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ?

ಅ) ೧೯೭೭ನೇ ಸಾಲಿನಲ್ಲಿ ಹೊಸದುರ್ಗ ತಾಲ್ಲೂಕಿನ ಗಂಜಿಗೆರೆ ಕೆರೆಯು ಭಾರಿ ಮಳೆಯಿಂದಾಗಿ ಒಡೆದು ಹೋದದ್ದು ನಿಜವೆ?

ಆ) ಇದರಿಂದ ಹಿಂಬಾಗದಲ್ಲಿದ್ದ ಗದ್ದೆ ಮತ್ತು ತೋಟಗಳು ಕೊಚ್ಚಿ ಹಾಳಾಗಿರುವುದು ನಿಜವೇ?

ಇ) ಹಾಗಿದ್ದಲ್ಲಿ, ನಷ್ಟದ ಪ್ರಮಾಣ ಎಷ್ಟು?

ಈ) ನಷ್ಟದ ಬಗ್ಗೆ ರೈತರು ಪರಿಹಾರ ಕೇಳಿರುತ್ತಾರೆಯೆ?

ಉ) ಹಾಗಿದ್ದಲ್ಲಿ. ರೈತರಿಗೆ ಈವರೆಗೂ ಪರಿಹಾರ ಕೊಡದಿರಲು ಕಾರಣಗಳೇನು?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ರಾಜ್ಯ ಸಚಿವರು).—

ಅ) ನಿಜ.

ಆ) ನಿಜ.

ಇ) ನಷ್ಟದ ಪ್ರಮಾಣ ಹಿಂದೆ ಅಂದಾಜು ಮಾಡಿಲ್ಲ.

ಈ) ಶ್ರೀ ಕೃಷ್ಣಮೂರ್ತಿ ಎಂಬುವರು ಒಬ್ಬರೇ ಪರಿಹಾರ ಕೇಳಿರುತ್ತಾರೆ.

ಉ) ಕಂದಾಯ ಇಲಾಖೆಯವರು ಪರಿಹಾರ ಕೊಡಲು ಬರುವುದಿಲ್ಲವೆಂದು ಪರಿಹಾರ ಕೇಳಿರುವವರಿಗೆ ತಿಳಿಸಿರುತ್ತಾರೆ.

ಕಾರಂಜಿ ಯೋಜನೆಯ ಪ್ರಗತಿಯ ಬಗ್ಗೆ

೨೪೦. ಶ್ರೀ ವಿ ಎಸ್. ಆಚಾರ್ಯ (ಉಡುಪಿ).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?